# ಕೇಳಿದೆ ನಿನ್ನಯ ಸುದ್ದಿ ಕೇಳಿದೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 246.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 200.
3. **Note:** Lyrics mentioned without highlights are as per Ref. 1. The wordings in Ref. 2 are similar to Ref. 1 except few differences which are given in yellow highlights.
4. **Note:** The Ankita is different in both the books. We have considered Ref.1 as standard and taken that Ankita for listing.
5. **Note:** Singer has followed the lyrics as in Ref. 2.

ರಾಗ: ಶಂಕರಾಭರಣ ತಾಳ: ಅಟ

ಕೇಳಿದೆ ನಿನ್ನಯ ಸುದ್ದಿ ಕೇಳಿದೆ || ಪ ||

ನೀರೊಳು ಮುಳುಗಿದೆಯಂತೆ, ದೊಡ್ಡ
ಭಾರ ಗಿರಿಯ ಪೊತ್ತೆಯಂತೆ, ಗೆಡ್ಡೆ
ಬೇರು ಗೆಣಸು ಮೆದ್ದೆಯಂತೆ, ಆಹಾ
ಮೂರೆರಡರಿಯದ ಪೋರನ (ತರಳನ) ಮಾತಿಗೆ
ಘೋರ ದಾನವನ ಸಂಹಾರ ಮಾಡಿದೆಯೆಂದು || 1 ||

ನಾರಿಯೊಬ್ಬಳ ಪೆತ್ತೆಯಂತೆ ಹೆತ್ತ (ಪೆತ್ತ)
ನಾರಿಯಳನು ಕೊಯ್ದೆಯಂತೆ ನಿನ್ನ
ನಾರಿ ಚೋರನ ಕೊಂದೆಯಂತೆ ಆಹಾ
ಊರ ನಾರಿಯರಿಂದ ಬೈಸಿಕೊಳ್ಳುತ ಪರ (ಊರ ನಾರಿಯರ ಸೂರೆಗೊಳ್ಳುತ ಪರ)
ನಾರಿಯರಭಿಮಾನ ಗಾರು ಮಾಡಿದೆಯೆಂದು || 2 ||

ತುರಗ ರಾವುತನಾದೆಯಂತೆ ನಿನ್ನ

ಕರದಿ ಕಡೆಗೋಲು ನೇಣಂತೆ ನಿನಗೆ
ಸರಿ ಧರೆಯೊಳಗಿಲ್ಲವಂತೆ ಆಹಾ
ವರದ ಪುರಂದರ ವಿಠ್ಠಲ ನಿನ್ನಯ (ವರದ ಶ್ರೀ ಪುರಂದರ ವಿಠ್ಠಲ ನಿನ್ನ ಈ)
ಪರಿ ಪರಿ ಮಹಿಮೆಯ ಹರುಷದಿಂದಲಿ ನಾ (ಹರುಷಿಸುತಲಿ ನಾನು) || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಗೆಡ್ಡೆ ಬೇರು ಗೆಣಸು ಮೆದ್ದೆಯಂತೆ** – ವರಾಹ; ಹಂದಿಯ ಸ್ವಭಾವವನ್ನು ಹಿಡಿದು.

**ಮೂರೆರಡರಿಯದ ಪೋರ** – ಪ್ರಹ್ಲಾದ, ಏನೂ ಅರಿಯದ ಹಸುಳೆ.

**ನಾರಿಯೊಬ್ಬಳ ಪೆತ್ತೆಯಂತೆ** – ತ್ರಿವಿಕ್ರಮನಾಗಿ ಭೂದೇವಿಯನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡು ಅನಂತರ ಹೊರಹೊಮ್ಮಿಸಿದನೆಂದು ವಾಮನಪುರಾಣದ ಕತೆ (ಅಧ್ಯಾಯ 75, 'ಗರ್ಭಭೂಮಿಮಾಪೂರಯತ್').

**ಹೆತ್ತ ತಾಯಿಯನ್ನು** – ಜಮದಗ್ನಿಯ ಪತ್ನಿಯಾದ ರೇಣುಕೆಯನ್ನು.

**ನಾರಿಯರಭಿಮಾನ...** – ಬೌದ್ಧಾವತಾರದಲ್ಲಿ.

**Classification:** Keerthane
**Ankita:** sri purandara vittala
**Location:** NA
**Category:** Dashavatara
**Sub-Category:** niru, parvata, asura, hennu, kalla, ooru, abhimaana, kudure, bhumi, santosha, bayyi, Varthe, prahallada, dashavatara, gange, gopi, hengasu,
**Pravachana:** NA
**Explanation:** Dr. Chaturvedi S Vedavyasachar, Bengaluru.